ಎರಡು ಭಾಗವಾಗಿಸಿಕೊಂಡು ಬೇಸಿಗೆ ಮತ್ತು ಬಿರುಬೇಸಿಗೆ ಕಾಲಗಳೇ ವಿಜೃಂಭಿಸುವುದನ್ನು ಕಂಡು ರೂಢಿಯಾಗಿರುವ ಹಿರಿತಲೆಗಳು `ರಾಜ ಹೋಗಿ ರಾಜಕಾರಣಿ ಬಂದ ಅಷ್ಟೇ. ಊರುದ್ಧಾರದ ವಿಷಯಕ್ಕೆ ಬಂದರೆ ಅವನು ಅಪ್ಪ, ಈಗಿನವನು ಅವರಪ್ಪ' ಎಂದು ಹೇಳಿ ಈ ಊರಿನ ದುರದೃಷ್ಟವನ್ನು ಹಳಿಯುತ್ತ ಲೊಟ್ಟೆ ಲೊಟ್ಟೆ ಕಫ ಕಿತ್ತು ಬರುವಂತೆ ಕೆಮ್ಮಿ ಕ್ಯಾಕರಿಸಿ ಉಗಿಯುತ್ತಾರೆ. ರಣಬಿಸಿಲಿನ ಬಾಣಲೆಯಂಥ ಈ ಊರಿನ ವಾರ್ಷಿಕ ಮಳೆಯ ಪ್ರಮಾಣವು ಆ ವರ್ಷ ರೈತರು ಸುರಿಸುವ ಕಣ್ಣೀರಿನ ಪ್ರಮಾಣದ ಒಂದಂಶದಷ್ಟಾದರೆ ಕಡಿಮೆಯೆಂದೂ, ಎರಡಂಶ ದಷ್ಟಾದರೆ ಹೆಚ್ಚಾಯಿತೆಂದೂ ಅವರು ವಿಷಾದ ಬೆರೆಸಿ ವ್ಯಂಗ್ಯವಾಡುತ್ತಾರೆ. ಹಾಗಾಗಿ ಈಗ ಈ ಮಳೆಯು ಬೀಳತೊಡಗಿದ ಮರುಕ್ಷಣವೇ, ಮಿಲನಕ್ಕೆ ಸಿದ್ಧವಾದ ಹೆಣ್ಣಿನಂತೆ ಭೂಮಿ ನಿಧಾನವಾಗಿ ಅರಳುತ್ತ ಮಣ್ಣಿನ ಘಮಲನ್ನು ಗಾಳಿಯಲ್ಲಿ ಸೂಸತೊಡಗಿತು. ಎಳ್ಳುಕಾಳಿನಷ್ಟಿಂದ ಶುರುವಾದ ಮಳೆಹನಿಗಳ ಗಾತ್ರವು ಕ್ರಮೇಣ ಅಡಿಕೆ ಗಾತ್ರದಷ್ಟಾಗಿ ಬೆಳೆಯತೊಡಗಿತು. ಮಣ್ಣವಾಸನೆಯು ಬೆರೆತ ಹಿತವಾದ ತಂಗಾಳಿ. ಸುಖದ ಮುಲುಕಾಟದಂತೆ ಕೇಳಿದಷ್ಟೂ ಹಿತವೆನ್ನಿಸುವ ಮಳೆ ಹನಿಗಳ ಸದ್ದು. ಮೋಡಗಳು ಕಪ್ಪಾಗಿ ಒತ್ತೊತ್ತಾಗಿ ಕೂಡಿಕೊಳ್ಳುತ್ತ ಮತ್ತಷ್ಟು ಇನ್ನಷ್ಟು ಮಗದಷ್ಟು ದಟ್ಟವಾಗತೊಡಗಿ ಕಾರಿರುಳ ಕಟ್ಟೇಕಾಂತ ಸೃಷ್ಟಿಸಿದ ಹೋರುಗಾಳಿ. ಆ ಕಡೆಗೊಮ್ಮೆ ಈ ಕಡೆಗೊಮ್ಮೆ, ನೇರವಾಗೊಮ್ಮೆ, ಓರೆಯಾಗೊಮ್ಮೆ ದಿಕ್ಕು ಬದಲಿಸುತ್ತ ಸಳ್ಳ್ ಎಂದು ಸಳಕಿಸುವ ಈಸಲು.

ತಿಮೋತಿ ಮನೆಯಿಂದ ಹೊರಬಂದು ಮೇಲೆ ನೋಡಿದ.

ರೊಟ್ಟಿ ಹೆಂಚಿನ ಮಸಿಗೆ ಮತ್ತಷ್ಟು ಕಪ್ಪನ್ನು ಮೆತ್ತಿ ಬೋರಲಾಗಿ ನಿಲ್ಲಿಸಿದಂತಿತ್ತು. ಅವನಿಗೆ ತನ್ನ ಹಳ್ಳಿ, ಅಲ್ಲಿಯ ಹೊಲಗಳು, ಅಪ್ಪ, ಅಮ್ಮ ನೆನಪಾದರು. ಮಳೆಗಾಳಿಯ ಇರುಸಲು ಬಡಿದು ಆ ಹನಿಗಳ ಪ್ರೋಕ್ಷಣೆಯಲ್ಲಿ ಜೀವ ತಂಪಾಯಿತು. ಕ್ಷಣಮಾತ್ರದಲ್ಲಿ ಅವನು ಅರ್ಧಕ್ಕಿಂತ ಹೆಚ್ಚು ತೋಯ್ದುಹೋಗಿದ್ದ. ದೇವರನ್ನು ನಂಬದ ಅವನು ತನಗರಿವಿಲ್ಲದೆ ಎರಡೂ ಕೈಯೆತ್ತಿ ಮುಗಿಲಿಗೆ ನಮಿಸಿ ಒಳಹೋದ.

ಮಧ್ಯರಾತ್ರಿಯಲ್ಲಿ ಹೊರಗಡೆ ಹೋ ಎಂಬ ಗದ್ದಲ.

ಮಾತು, ಮಳೆ, ಗಾಳಿ ಮತ್ತು ಗುಡುಗುಗಳು ಒಂದರೊಳಗೊಂದು ಬೆರೆತು ಉಂಟಾದಂತೆ ಕೇಳುತ್ತಿರುವ ವಿಚಿತ್ರ ಶಬ್ದಲೋಕ. ಕಣ್ಣುಜ್ಜಿಕೊಳ್ಳುತ್ತ ಎದ್ದು ಬಂದ ತಿಮೋತಿ. ಎದುರಿನ ಅಪಾರ್ಟ್‌ಮೆಂಟಿನಲ್ಲಿನ ಜನವೆಲ್ಲ ಹೊರಗೆ ಬಂದಿದ್ದಾರೆ. ಮಳೆಯೋ ಧೋ ಎಂದು ಏಕಪ್ರಕಾರವಾಗಿ ಒಳ್ಳೆ ನಡಿಗೆ ಹಿಡಿದ ಕುದುರೆಯಂತೆ ಸುರಿಯುತ್ತಲಿದೆ. ಕರೆಂಟು ಹೋದಾಗ ಮಾತ್ರ ಮನೆಗಳಿಂದ ಹೊರ ಬರುವ ಈ ಮನೆಗಳ ಹೆಂಗಸರು ಈ ಮಹಾಮಳೆ ತಂದೊದಗಿಸಿದ ಆಪತ್ತಿನಲ್ಲಿ, ಆಶ್ಚರ್ಯ ಮೂಡಿಸುತ್ತ ಪರಸ್ಪರ ಮಾತಾಡುತ್ತಿದ್ದಾರೆ. ಅವರ ಗಂಡಂದಿರು ಬನಿಯನ್ನು, ಟೀ ಶರ್ಟು, ಲುಂಗಿ, ತ್ರೀಫೋರ್ತ್ ಮತ್ತು ಬರ್ಮುಡಾಗಳಂಥ ಸಡಿಲ ಉಡುಪುಗಳಲ್ಲಿ ತೊಯ್ದು ತೊಪ್ಪೆಯಾಗಿ ಈ ಮಳೆ ನೀರು ಒಳನುಗ್ಗದಂತೆ ತಡೆವ ಉಪಾಯಗಳನ್ನು ಕಾರ್ಯಗತಗೊಳಿಸುತ್ತ ತಮ್ಮ ಬೆವರನ್ನು ಮಳೆಯಲ್ಲಿ ಬೆರೆಸುತ್ತಿದ್ದಾರೆ. ಪ್ರಕೃತಿಯ ಕೂಸೇ ಆದ ಮನುಷ್ಯ ಅದರ ಸೆಡವಿನ ಮುಂದೆ ಮಾತ್ರ ಹೇಗೆ ತನ್ನ ನೀರು, ಕಣ್ಣೀರು, ಬೆವರು ಮತ್ತು ನಿಟ್ಟುಸಿರುಗಳನ್ನು ಒಂದರೊಳಗೊಂದು ಕೂಡಿಸಿಕೊಂಡ ಭಯದಲ್ಲಿ ಎಷ್ಟು ತೃಣ ಮಾತ್ರದವನಾಗಿ, ಎಂಥ ಒಂದು ಕ್ಷುದ್ರ ಹುಳು ಮಾತ್ರದವನಾಗಿ ಕಾಣಿಸುತ್ತಾನಲ್ಲ ಎಂಬ ಆಲೋಚನೆ ಹೊಳೆದು ನಡುಗಿದ.

ಕರೆಂಟಿಲ್ಲದೆ ಕಾರ್ಗತ್ತಲು ಆವರಿಸಿಕೊಂಡಿತ್ತು. ನೆಲಮುಗಿಲುಗಳನ್ನು ಏಕ ಮಾಡಿದ ಶರಸೇತುವೆಯಂತೆ ಮಳೆಹನಿಗಳು ಅಲ್ಲಿಂದಿಲ್ಲಿಗೆ ಹರಡಿಕೊಂಡಿದ್ದವು. ಖಡ್ ಖಡಲ್ ಎಂದು ಎಲ್ಲೋ ಸಿಡಿಲು ಬಿದ್ದ ಶಬ್ದ. ಫಳ್ ಫಳಾರ್ ಎಂದು ಮುಗಿಲ ಪರದೆಯನ್ನು ಸೀಳಿಕೊಂಡು ಬೆಳಗುವ ಮಿಂಚು. ಬೆಟ್ಟದ ಮೇಲಿಂದ ಅಗಾಧ ಗುಂಡುಗಳುರುಳಿದಂತೆ ಭಯಾನಕವಾದ ಗುಡು ಗುಡು ಗುಡು.. ಗುಡುಗಿನ ಸದ್ದು. ತಿಮೋತಿ ಸಲಿಕೆ ತೆಗೆದುಕೊಂಡು ಬಂದು ನೋಡುತ್ತಾನೆ. ಆವರಿಸಿದ ಕತ್ತಲಿನಲ್ಲಿ ಟಾರ್ಚ್, ಚಾರ್ಜರ್ ಲೈಟುಗಳ ಬೆಳಕಿನ ಸಹಾಯ ಪಡೆದು ಕೆಲಸ ಮಾಡುತ್ತಿದ್ದಾರೆ ಅವರೆಲ್ಲ. ಪ್ರತಿಯೊಬ್ಬನೂ ಆ ವಠಾರದ ಕಾಂಪೌಂಡ್ ಗೇಟನ್ನು ದಾಟಿಕೊಂಡು ಒಳನುಗ್ಗುತ್ತಿರುವ ಮಳೆನೀರನ್ನು ತಡೆಯಲೆಂದು ತಮ್ಮ ತಮ್ಮ ಮನೆಗಳ ಹೊಸ್ತಿಲ ಮುಂದೆ ಮಣ್ಣಿನ ಒಡ್ಡು ನಿರ್ಮಿಸುತ್ತಿದ್ದಾರೆ.

'ಯಾರ ಮನೆ ಬಾಗಿಲು ಅವರು ಹಾಕಿಕೊಂಡರೆ ಕೊಲೆ ಸುಲಿಗೆಗಳು ತಪ್ಪುವಂತಿದ್ದರೆ ಊರಿಗೊಂದು ದಿಡ್ಡಿ ಬಾಗಿಲು ಯಾಕೆ ಬೇಕಿರುತ್ತಿತ್ತು? ಪ್ರತಿ ರಾತ್ರಿ ಅದನ್ನು ಯಾಕೆ ಹಾಕಬೇಕಾಗಿತ್ತು?' ಎಂಬ ಆಲೋಚನೆ ಅವನ ತಲೆಯಲ್ಲಿ ಮೂಡಿ ಮಾಯವಾಯಿತು. ಅವನಿಗೆ ಅವರ ಪಾಡು ನೋಡಿ ಕನಿಕರವೆನಿಸಿತು. ಸಲಿಕೆಯಿಂದ ಮಣ್ಣನ್ನು ಕಡಿಕಡಿದು ಗೇಟಿಗೆ ಒಡ್ಡು ಹಾಕತೊಡಗಿದ.

ಅವನ ಮನೆಯನ್ನು ಮತ್ತು ಅವರ ವಠಾರವನ್ನು ಬೇರ್ಪಡಿಸಿರುವ ಆ ಕಿರು ರಸ್ತೆ ಇಕ್ಕೆಲದಲ್ಲಿ ಡ್ರೈನೇಜುಗಳನ್ನು ಹೊಂದಿದ್ದರೂ ಅದಕ್ಕಿನ್ನೂ ಟಾರು ಬಂದಿರಲಿಲ್ಲ. ಈಗ ಅದರ ಮೇಲೆ ಮೊಳಕಾಲೆತ್ತರ ಹರಿಯುತ್ತಿರುವ ನೀರು ಆ ಡ್ರೈನೇಜುಗಳನ್ನೂ ಮುಚ್ಚಿ ಹಾಕಿತ್ತು. ಡ್ರೈನೇಜಿನಲ್ಲಿ ಸರಾಗವಾಗಿ ನೀರು ಹರಿಯಲು ಅವಕಾಶವಾಗದಂತೆ ಬೆಳೆದಿರುವ ಪಾರ್ಥೇನಿಯಂ ಕಳೆಯಿಂದಾಗಿಯೇ ಅವುಗಳು ಬ್ಲಾಕಾಗಿ, ಆ ನೀರೆಲ್ಲ ರಸ್ತೆ ಮೇಲೆ ಹರಿಯುತ್ತಿದೆಯೆಂದುಕೊಂಡ ತಿಮೋತಿ. ಮಳೆ ಹನಿಗಳು ಮುಖಕ್ಕೆ ರಾಚುತ್ತಲೇ ಇದ್ದವು. ಫಳ್ ಫಳಾರ್.. ಎಂಬ ಸದ್ದಿನೊಂದಿಗೆ ಮಿಂಚು ಹೊಡೆಯಿತು. ಕರಿ ಪಾಟಿ ಮೇಲೆ ಮಗುವೊಂದು ಸರಕ್ಕನೆ ಮೇಲಿಂದ ಕೆಳಗೆ ಅಂಕುಡೊಂಕಾದ ಗೆರೆ ಬರೆದಂತೆ ಆ ಕಾರ್ಮುಗಿಲನ್ನು ಸೀಳಿಕೊಂಡು ಆ ಬೆಳ್ಳಿಗೆರೆಯು ಬೆಳಗಿ ಮಾಯವಾಯಿತು. ಅದು ಕಾಣಿಸಿದ ಬೆಳಕಿನಲ್ಲಿ ರಸ್ತೆಯ ಆ ತುದಿಯಿಂದ ಈ ತುದಿವರೆಗಿನ ಡ್ರೈನೇಜನ್ನು ಕಣ್ಣಂದಾಜಿನಲ್ಲೇ ಗುರುತಿಸಿಕೊಂಡ ತಿಮೋತಿ, ಕೈ ಹಾಕಿ ಪಾರ್ಥೇನಿಯಂ ಕಳೆಗಳನ್ನು ಬೇರು ಸಹಿತ ಕಿತ್ತು ಕಿತ್ತು ಎಳೆದುಹಾಕತೊಡಗಿದಂತೆ ಅವು ರಸ್ತೆ ಮೇಲಿನ ನೀರಪ್ರವಾಹದಲ್ಲಿ ತೇಲಿಕೊಂಡು ಹೋಗತೊಡಗಿದವು. ಉಸಿರುಗಟ್ಟಿ ಉಬ್ಬಸಪಡುತ್ತಿದ್ದ ಕಾಲುವೆಗಳು ನಿಸೂರಾಗಿ ಉಸಿರಾಡತೊಡಗಿದವು. ಬಗ್ಗಿ ಎದ್ದು ಬಗ್ಗಿ ಎದ್ದು ನಡುವು ನೋಯತೊಡಗಿದವು. ಸಬ್ಬರೆಲ್ಲ ಮನೆ ಸೇರಿಕೊಂಡು ಸುಮಾರು ಹೊತ್ತಾಗಿತ್ತು. ಗೇಟಿನಿಂದ ಸಾಗುತ್ತಿದ್ದ ಒಳಹರಿವನ್ನು ಅವನು ಹಾಕಿದ ಒಡ್ಡು ಎಷ್ಟೋ ಅಷ್ಟು ತಡೆದಿತ್ತು. ಇನ್ನು ಅವರವರು ತಮ್ಮ ಹೊಸ್ತಿಲುಗಳ ಮುಂದೆ ಹಾಕಿಕೊಂಡ ಒಡ್ಡುಗಳು ಕೂಡ ಎಷ್ಟೋ ಅಷ್ಟು ಕೆಲಸ ಮಾಡಿದ್ದವು. ಫಳ್ ಫಳಾರ್ ಎಂದು ಮತ್ತೊಮ್ಮೆ ಹೊಳೆದ ಮಿಂಚು ಕಣ್ಣಳತೆಯ ದೂರದ ಎಲ್ಲವನ್ನೂ ಒಮ್ಮೆಗೆ ಕಾಣಿಸಿತು. ಎಲ್ಲ ಒಡ್ಡುಗಳು ಮಕ್ಕಳಾಡಿ ಅರ್ಧಕ್ಕೆ ಬಿಟ್ಟು ಹೋದ ಮಣ್ಣಗುಪ್ಪೆಗಳಂತೆ ಕಾಣಿಸಿದವು.

ಮಳೆ ಹಾಗೇ ಒಂದೇ ಪ್ರಕಾರವಾಗಿ ಸುರಿಯುತ್ತಲಿತ್ತು ಕಳೆದುಕೊಂಡ ವಸ್ತುವೊಂದನ್ನು ಏಕೋನಿಷ್ಠೆಯಿಂದ ಹುಡುಕುತ್ತಿರುವ ಉದ್ವಿಗ್ನ ಹುಡುಗನಂತೆ.

## 2

ಬೆಳಿಗ್ಗೆ ಎದ್ದು ನೋಡುತ್ತಾನೆ.

ಮಂಚದ ಕಾಲುಗಳೆಷ್ಟೆತ್ತರ ನೀರು ತುಂಬಿಕೊಂಡಿತ್ತು ಮನೆಯಲ್ಲಿ. ಪಾತ್ರೆಗಳೆಲ್ಲ ಕಾಗದದ ದೋಣಿಗಳಂತೆ, ಕಡಿದು ಬಿದ್ದ ಮರದಂತೆ ನಿಂತಲ್ಲೇ ಆಚೀಚೆ ಓಲಾಡುತ್ತಿದ್ದವು. `ಏನ್ರೀ ಇದು' ಎಂದು ಎದ್ದವಳೇ ಭಯಭೀತ ಧ್ವನಿ ತೆಗೆದಳು ಅವನ ಹೆಂಡತಿ.

ಆ ಕೂಗಿಗೆ ಮಗಳಿಗೆ ಎಚ್ಚರವಾಯಿತು. ಎರಡು ವರ್ಷದ ಮಗಳು ಎದ್ದು ನೋಡ್ತಾಳೆ ಅವಳಿಗೆ ತನ್ನ ಕಣ್ಣನ್ನೇ ನಂಬಲಾಗುತ್ತಿಲ್ಲ. ಮನೆಯಲ್ಲಿ ಮೊಳಕಾಲಷ್ಟೆತ್ತರ ನೀರು. ಅದರಲ್ಲಿ ತೇಲಾಡುತ್ತಿರುವ ಪಾತ್ರೆಗಳು. ಅವಳ ಸಂತೋಷಕ್ಕೆ ಪಾರವೇ ಇಲ್ಲ.

ಗಂಡ ಹೆಂಡತಿ ಸೇರಿ ಕಚ್ಚೆ ಕಟ್ಟಿಕೊಂಡು ಬೋಗುಣಿಯಿಂದ ನೀರನ್ನು ಮೊಗೆಮೊಗೆದು ಹೊರಗೆ ಹಾಕತೊಡಗಿದಂತೆ ಮಗಳು `ಬುವ್ವ ಬುವ್ವ ಬುವ್ವ..' ಎಂದು ಮಂಚದ ಮೇಲೆ ನಿಂತಲ್ಲೆ ಚಪ್ಪಾಳೆ ತಟ್ಟುತ್ತ ಕುಣಿಯತೊಡಗಿದಳು. ನೀರನ್ನು ಎತ್ತಿ ಹಾಕುವುದು ಅವಳಿಗೆ ತಿಳಿದಂತಿಲ್ಲ. ಅದು ತಿಳಿದ ಮೇಲೆ ಅವಳ ರಂಪವನ್ನು ಊಹಿಸಿಯೇ ಹೆದರುತ್ತ, ರಮಿಸುವ ಉಪಾಯ ಯೋಚಿಸುತ್ತ ತಿಮೋತಿಯ ಹೆಂಡತಿ ಭುಸುಗುಡುವ ಹಾವಿನಂತೆ ಸದ್ದು ಮಾಡಿ ದೀರ್ಘವಾದ ನಿಟ್ಟುಸಿರು ಬಿಟ್ಟಳು.

ಶತಶತಮಾನಗಳ ಸೇಡು ತೀರಿಸಿಕೊಂಡಂತೆ ರಾತ್ರಿಯೆಲ್ಲ ಮಳೆ ಒಂದೇ ಸಮ ಹೊಯ್ದಿತ್ತು. ಪ್ರೀತಿ ಕೂಡ ನಿರೀಕ್ಷೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಸಿಕ್ಕರೆ, ಸಿದ್ಧತೆಯಿಲ್ಲದ ಸ್ವೀಕರಿಸುವವ